**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-225/2023**

ಪಿ.ಡಬ್ಲ್ಯೂಃ- 3
ಸಿ.ಡಬ್ಲ್ಯೂಃ- 4

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಪುನೀತ್ ಟಿ.ಎಸ್. |
| ತಂದೆಯ ಹೆಸರುಃ | : | ಸ್ವಾಮಿ |
| ವಯಸ್ಸುಃ | : | 31 ವರ್ಷ |
| ವೃತ್ತಿಃ | : | ಚಾಲಕ |
| ವಾಸಃ | : | ನರಸಿಂಹನಾಯಕ ನಗರ, ಹೊಳೇನರಸೀಪುರ ಟೌನ್. |

**ದಿನಾಂಕಃ 13-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ಚಂದ್ರಮೌಳಿ ಉಃ ಮುರುಳಿ ಗೊತ್ತು. ನಾನು ನನ್ನ ಟಿ ಟಿ ವಾಹನದಲ್ಲಿ ಗಾರ್ಮೆಂಟಿಗೆ ಹೋಗುವ ಜನರನ್ನು ಕರೆದುಕೊಂಡು ಹೋಗಿ ಹಾಸನದ ಗಾರ್ಮೆಂಟಿಗೆ ಬಿಟ್ಟು ಬರುವ ಕೆಲಸ ಮಾಡುತ್ತೇನೆ. ಆ ಕಾಲದಲ್ಲಿ ನಾನು ಆರೋಪಿ ಚಂದ್ರಮೌಳಿಯನ್ನು ನೋಡಿರುತ್ತೇನೆ. ನನಗೆ ಚಾಸಾ-3 ರಾಜೇಶ್ವರಿ ರವರು ಗೊತ್ತು. ಆರೋಪಿತನ ಪತ್ನಿ ಅಂಬಿಕಾ ನನಗೆ ಗೊತ್ತು. ದಿಃ20.07.2023 ರಂದು ನಾನು ಎಂದಿನಂತೆ ನನ್ನ ಟಿ ಟಿ ವಾಹನದಲ್ಲಿ ಜನರನ್ನು ಬಾಡಿಗೆಗೆ ಕರೆದುಕೊಂಡು ಹೋಗಿ ನನ್ನ ವಾಹನವನ್ನು ನಿಲ್ಲಿಸಿ ನನಗೆ ಬೇರೆ ಕೆಲಸ ಇದ್ದ

ಕಾರಣ ಹೊಳೇನರಸೀಪುರಕ್ಕೆ ಬರುವ ಸಲುವಾಗಿ ಚೆನ್ನಪಟ್ಟಣ ಸರ್ಕಲ್ ಗೆ ಹೋಗಿ ಬೆಳಿಗ್ಗೆ 9 ಗಂಟೆ ಸಮಯದಲ್ಲಿ ಹೊಳೇನರಸೀಪುರಕ್ಕೆ ಹೋಗುವ ಬಸ್ಸಿನಲ್ಲಿ ಹತ್ತಿಕೊಂಡು ಪ್ರಯಾಣಿಸುತ್ತಿದ್ದೆ. ಕೆ ಐ ಡಿ ಬಿ ಸರ್ಕಲ್ ನಲ್ಲಿ ನನಗೆ ಪರಿಚಯ ಇರುವ ಆರೋಪಿ ಚಂದ್ರಮೌಳಿ ಹಾಗೂ ಆತನ ಪತ್ನಿ ಅಂಬಿಕಾ ರವರು ಸಹ ನಾನು ಪ್ರಯಾಣಿಸುತ್ತಿದ್ದ ಬಸ್ಸನ್ನು ಹತ್ತಿದರು. ನಾನು ಬಸ್ಸಿನ ಡ್ರೈವರ್ ಹಿಂಭಾಗದ ಸೀಟಿನಲ್ಲಿ ಕುಳಿತುಕೊಂಡಿದ್ದೆ. ಚಂದ್ರಮೌಳಿ ಹಾಗೂ ಆತನ ಹೆಂಡತಿ ಅಂಬಿಕಾ ಡ್ರೈವರ್ ಪಕ್ಕದ ಸೀಟಿನಲ್ಲಿ ಕುಳಿತುಕೊಂಡಿದ್ದರು. ಬಸ್ಸು ಸ್ವಲ್ಪ ದೂರ ಹೋದ ಮೇಲೆ ಚಂದ್ರಮೌಳಿ ಹಾಗೂ ಆತನ ಹೆಂಡತಿ ಬಸ್ಸಿನಲ್ಲಿ ಜೋರು ಧ್ವನಿಯಲ್ಲಿ ಮಾತನಾಡಿಕೊಂಡು ಜಗಳ ಪ್ರಾರಂಭಿಸಿದರು. ನಾನು ಅವರನ್ನು ಯಾಕೆ ಜಗಳ ಆಡುತ್ತಿದ್ದೀರಿ, ಜಗಳ ಆಡಬೇಡಿ, ಮನೆಗೆ ಹೋಗಿ ನಿಮ್ಮ ಸಮಸ್ಯೆ ಬಗೆಹರಿಸಿಕೊಳ್ಳಿ ಎಂದು ಹೇಳಿದೆ. ಆಗ ಚಂದ್ರಮೌಳಿ ಆತನ ಆಟೋ ಕೆಟ್ಟು ಹೋಗಿದ್ದು ಅದನ್ನು ರಿಪೇರಿ ಮಾಡಿಸಲು ಆತನ ಪತ್ನಿ ಸಂಘದಿಂದ ಹಣ ತೆಗೆದುಕೊಡುತ್ತಿಲ್ಲ ಎಂದು ಹೇಳಿದ. ಚಂದ್ರಮೌಳಿಯ ಹೆಂಡತಿ ಅಂಬಿಕಾ ರವರು ಈಗಾಗಲೇ ಆಟೋ ತೆಗೆದುಕೊಳ್ಳಲು ಸಾಲ ಮಾಡಿದ್ದು ಈಗ ಮತ್ತೆ ಸಂಘದಲ್ಲಿ ಸಾಲ ಮಾಡಲು ಆಗುವುದಿಲ್ಲ ಎಂದು ಹೇಳಿದರು. ಆರೋಪಿ ಚಂದ್ರಮೌಳಿ ನನ್ನನ್ನು ಕುರಿತು ಆಟೋ ರಿಪೇರಿ ಮಾಡಿಸಲು ಯಾವುದಾದರೂ ಮೆಕಾನಿಕ್ ನ ವಿಳಾಸ ಇದ್ದಲ್ಲಿ ನೀಡುವಂತೆ ಕೇಳಿದ್ದು ನಾನು ನನಗೆ ಗೊತ್ತಿರುವ ಮೆಕಾನಿಕ್ ನ ವಿಳಾಸವನ್ನು ಚಂದ್ರಮೌಳಿಗೆ ನೀಡುವುದಾಗಿ ಹೇಳಿದೆ. ನಂತರ ಚಂದ್ರಮೌಳಿ ಆತನ ಪತ್ನಿಯನ್ನು ಕುರಿತು ನೀನು ಕೆಲಸಕ್ಕೆ ಹೋಗುವುದು ಬೇಡ ಮನೆಗೆ ಹೋಗೋಣ ಎಂದು ಹೇಳಿದ. ಬಸ್ ಹೊಳೇನರಸೀಪುರಕ್ಕೆ ಬಂದಾಗ ಚಂದ್ರಮೌಳಿ ಹಾಗೂ ಆತನ ಪತ್ನಿ ಅಂಬಿಕಾ ಬಸ್ಸಿನಿಂದ ಇಳಿದು ಹೋದರು. ಆ ದಿನ ಮಧ್ಯಾಹ್ನ 2 ಗಂಟೆ ಸಮಯದಲ್ಲಿ ಚಂದ್ರಮೌಳಿಯ

ಪತ್ನಿ ಅಂಬಿಕಾ ರವರು ಎಸ್ ಅಂಕನಹಳ್ಳಿ ಫಾರೆಸ್ಟಿನಲ್ಲಿ ಕೊಲೆ ಆಗಿರುವ ಬಗ್ಗೆ ನನಗೆ ತಿಳಿದು ಬಂತು. ಚಂದ್ರಮೌಳಿ ಹಾಗೂ ಅಂಬಿಕಾ ಬಸ್ಸಿನಲ್ಲಿ ನನಗೆ ಸಿಕ್ಕ ವಿಚಾರವನ್ನು ನಾನು ಅಂಬಿಕಾಳ ತಂಗಿ ಚಾಸಾ-3 ರಾಜೇಶ್ವರಿ ರವರಿಗೆ ತಿಳಿಸಿರುತ್ತೇನೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದು ನಾನು ನನ್ನ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

2. ನಾನು ಸುಮಾರು 5 ವರ್ಷಗಳಿಂದ ಟಿ ಟಿ ಡ್ರೈವರ್ ಕೆಲಸ ಮಾಡುತ್ತಿದ್ದೇನೆ. ನಾನು ವೃತ್ತಿಯಿಂದ ಚಾಲಕನಾಗಿರುತ್ತೇನೆ ಎನ್ನುವ ಬಗ್ಗೆ ಪೊಲೀಸರಲ್ಲಿ ನನ್ನ ಚಾಲನ ಪತ್ರ ಹಾಜರುಪಡಿಸಿಲ್ಲ. ನಾನು 5 ವರ್ಷಗಳಿಂದ ನನ್ನ ಟಿ ಟಿ ವಾಹನದಲ್ಲಿ ಗಾರ್ಮೆಂಟಿಗೆ ಜನರನ್ನು ಕರೆದುಕೊಂಡು ಹೋಗುವ ಕೆಲಸ ಮಾಡುತ್ತೇನೆ. ನನ್ನ ಗಾರ್ಮೆಂಟ್ ವಾಹನದಲ್ಲಿ ಸುಮಾರು 20 ಜನರು ಪ್ರತಿ ದಿನ ಸಾಮಾನ್ಯವಾಗಿ ಪ್ರಯಾಣಿಸುತ್ತಾರೆ. ನನ್ನ ಟಿ ಟಿ ವಾಹನದಲ್ಲಿ ಬರುವ ಜನರ ಪರಿಚಯ ನನಗೆ ಇರುತ್ತದೆ. ಅವರೆಲ್ಲರೂ ಹೊಳೇನರಸೀಪುರದಿಂದ ಪ್ರಯಾಣಿಸುತ್ತಾರೆ. ನನ್ನ ಟಿ ಟಿ ವಾಹನದಲ್ಲಿ ಪ್ರಯಾಣಿಸುವ ಎಲ್ಲಾ ಜನರ ಹೆಸರು ಹಾಗೂ ವಿಳಾಸ ನನಗೆ ಹೇಳಲು ಆಗುವುದಿಲ್ಲ. ನಾನು ಆರೋಪಿಯನ್ನು 4-5 ಬಾರಿ ನೋಡಿರುವ ಕಾರಣ ನನಗೆ ಆತನ ಪರಿಚಯ ಇರುತ್ತದೆ. ಮೃತ ಅಂಬಿಕಾರವರನ್ನು ನಾನು ಆರೋಪಿತನ ಜೊತೆ ಬಸ್ಸಿನಲ್ಲಿ ನೋಡಿದ್ದು ಆ ಮೊದಲು ನನಗೆ ಅಂಬಿಕಾ ರವರ ಪರಿಚಯ ಇರಲಿಲ್ಲ. ನಾನು ದಿಃ20.07.2023 ರಂದು ಬಸ್ಸಿನಲ್ಲಿ ಪ್ರಯಾಣಿಸಿರುತ್ತೇನೆ ಎನ್ನುವ ಬಗ್ಗೆ ಬಸ್ ಟಿಕೇಟನ್ನು ಪೊಲೀಸರಿಗೆ ಹಾಜರುಪಡಿಸಿಲ್ಲ. ನಾನು ಪ್ರಯಾಣಿಸಿದ ಬಸ್ ಕೆ ಎಸ್ ಆರ್ ಟಿ ಸಿ ಬಸ್ ಆಗಿದ್ದು ಅದು ಯಾವ ಡಿಪೋಗೆ ಸೇರಿದ ಬಸ್ ಎಂದು ನನಗೆ ತಿಳಿದಿಲ್ಲ. ಬಸ್ಸಿನಲ್ಲಿ ಪ್ರಯಾಣಿಸುವ ಜನರ ಗುರುತು ಸಾಮಾನ್ಯವಾಗಿ

ಹಿಡಿಯಲು ಆಗುವುದಿಲ್ಲ ಎಂದರೆ ಸರಿ. ಬಸ್ಸಿನಲ್ಲಿ ಗಲಾಟೆ ಮಾಡಿದಲ್ಲಿ ಗಲಾಟೆ ಮಾಡುವ ಪ್ರಯಾಣಿಕರನ್ನು ಕಂಡಕ್ಟರ್ ಹಾಗೂ ಡ್ರೈವರ್ ಬಸ್ಸಿನಿಂದ ಕೆಳಕ್ಕೆ ಸಾಮಾನ್ಯವಾಗಿ ಇಳಿಸುತ್ತಾರೆ ಎಂದರೆ ಸರಿ. ಬಸ್ಸಿನಲ್ಲಿ ಗಲಾಟೆ ಮಾಡುತ್ತಿದ್ದರು ಎನ್ನಲಾದ ಆರೋಪಿ ಹಾಗೂ ಆತನ ಪತ್ನಿಯನ್ನು ಬಸ್ ಕಂಡಕ್ಟರ್ ಹಾಗೂ ಡ್ರೈವರ್ ರವರು ಕೆಳಕ್ಕೆ ಇಳಿಸಲಿಲ್ಲ. ನಾನು ಪ್ರಶ್ನಿತ ದಿನಾಂಕದಂದು ಯಾವುದೇ ಬಸ್ಸಿನಲ್ಲಿ ಪ್ರಯಾಣಿಸಿಲ್ಲ ಹಾಗೂ ಆರೋಪಿ ಹಾಗೂ ಆತನ ಪತ್ನಿ ಬಸ್ಸಿನಲ್ಲಿ ಗಲಾಟೆ ಮಾಡಿರುವುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತ ಚಂದ್ರಮೌಳಿ ಆತನ ಆಟೋರಿಕ್ಷಾ ರಿಪೇರಿ ಮಾಡಿಸಲು ಮೆಕ್ಯಾನಿಕ್ ವಿಳಾಸ ನನ್ನ ಬಳಿ ಕೇಳಿದ ಎಂಬುದನ್ನು ನಾನು ಪೊಲೀಸರಲ್ಲಿ ನೀಡಿರುವ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ನಾನು ನನಗೆ ತಿಳಿದಿರುವ ಮೆಕ್ಯಾನಿಕ್ ವಿಳಾಸವನ್ನು ಚಂದ್ರಮೌಳಿಗೆ ನೀಡುವುದಾಗಿ ಹೇಳಿದೆ ಎಂಬುದನ್ನೂ ಸಹ ನಾನು ಪೊಲೀಸರಲ್ಲಿ ನೀಡಿರುವ ನನ್ನ ಹೇಳಿಕೆಯಲ್ಲಿ ತಿಳಿಸಿರುತ್ತೇನೆ. ಅಂಬಿಕಾ ರವರ ಕೊಲೆ ಆಗಿರುತ್ತದೆ ಎನ್ನುವ ಬಗ್ಗೆ ನನಗೆ ತಿಳಿಸಿದ ವ್ಯಕ್ತಿಯ ಹೆಸರು ನನಗೆ ನೆನಪಿಲ್ಲ. ಅಂಬಿಕಾ ರವರು ಕೊಲೆಯಾಗಿದ್ದ ಸ್ಥಳಕ್ಕೆ ನಾನು ಹೋಗಿರುವುದಿಲ್ಲ. ಅಂಬಿಕಾ ಕೊಲೆಯಾದ ಬಗ್ಗೆ ನನಗೆ ತಿಳಿದು ಬಂದ ಕೂಡಲೇ ನಾನು ಅಂಬಿಕಾ ಹಾಗೂ ಆರೋಪಿಯನ್ನು ಬಸ್ಸಿನಲ್ಲಿ ಒಟ್ಟಾಗಿ ನೋಡಿರುತ್ತೇನೆ ಎನ್ನುವ ಬಗ್ಗೆ ಕೂಡಲೇ ಪೊಲೀಸರಿಗೆ ತಿಳಿಸುವ ಪ್ರಯತ್ನ ಮಾಡಲಿಲ್ಲ. ಈ ವಿಷಯವನ್ನು ಪೊಲೀಸರಿಗೆ ತಿಳಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಾನು ಪೊಲೀಸರಲ್ಲಿ ಯಾವ ದಿನಾಂಕದಂದು ಹೇಳಿಕೆ ನೀಡಿರುತ್ತೇನೆ ಎಂದು ನನಗೆ ನೆನಪಿಲ್ಲ. ಅಂಬಿಕಾ ರವರ ಕೊಲೆಯಾದ ದಿನವೇ ನಾನು ಅಂಬಿಕಾ ಹಾಗೂ ಆರೋಪಿಯನ್ನು ಬಸ್ಸಿನಲ್ಲಿ ನೋಡಿರುವ ಬಗ್ಗೆ ಚಾಸಾ-3 ರಾಜೇಶ್ವರಿ ರವರಿಗೆ ಮಧ್ಯಾಹ್ನ ಸುಮಾರು 2.30 ಗಂಟೆ ಸಮಯಕ್ಕೆ

ತಿಳಿಸಿದೆ. ನಾನು ತಿಳಿಸಿರುವ ದಿನಾಂಕದಂದು ಯಾವುದೇ ಬಸ್ಸಿನಲ್ಲಿ ಪ್ರಯಾಣಿಸಿಲ್ಲ ಹಾಗೂ ಆರೋಪಿ ಹಾಗೂ ಅಂಬಿಕಾ ರವರನ್ನು ಬಸ್ಸಿನಲ್ಲಿ ನೋಡದಿದ್ದರೂ ಸಹ ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಬಸ್ಸಿನಲ್ಲಿ ಪ್ರಯಾಣಸಿದ್ದೇ ಆಗಿದ್ದಲ್ಲಿ ಬಸ್ಸಿನ ಟಿಕೇಟನ್ನು ಪೊಲೀಸರಿಗೆ ನೀಡುತ್ತಿದ್ದೆ ಹಾಗೂ ಬಸ್ಸಿನಲ್ಲಿ ಪ್ರಯಾಣಸಿರುವ ಬಗ್ಗೆ ಅದೇ ದಿನ ಪೊಲೀಸರಿಗೆ ತಿಳಿಸುತ್ತಿದ್ದೆ ಎಂದರೆ ಸರಿಯಲ್ಲ. ಘಟನೆಗೆ ಸಂಬಂಧಿಸಿದಂತೆ ನನಗೆ ಯಾವುದೇ ವಿಚಾರ ತಿಳಿದಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರಲ್ಲಿ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.